ಶ್ರೀ ಬಿ. ಬಸವಲಿಂಗಪ್ಪ —ಮನೆಗಳನ್ನು ಕಟ್ಟಿದ್ದೀರಿ ನಾಗಶೆಟ್ಟಿಹಳ್ಳಿಯಲ್ಲಿ ಕಟ್ಟಿದ್ದೀರಿ. ಹಾಗಾದರೆ ಕಟ್ಟಿರುವ ಮನೆಗಳನ್ನೆಲ್ಲ ನಮಗೆ ಕೊಟ್ಟುಬಿಡುತ್ತೀರಾ. ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಕಟ್ಟಿಸಿದ್ದೀರಿ. ನಾನು ಹೇಳುತ್ತಿದ್ದೇನೆ. ನೀವು ಇಲ್ಲವೆಂದು ಸುಳ್ಳು ಹೇಳುತ್ತೀರೆಲ್ಲ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಸೆಲ್ಫ್ ಫೈನಾನ್ಸಿಂಗ್ ಸ್ಕೀಮ್‌ನಲ್ಲಿ ಮಿಲ್‌ನವರಿಗೆ ಕೊಟ್ಟಿರುವುದು. ಅದರಲ್ಲಿ ರಿಸರ್ವೇಷನ್ ಇದೆ ನಿಮಗೂ ಕೊಡುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್. ದೊಮ್ಮಲೂರು ಲೇಔಟ್‌ನಲ್ಲಿ ಮತ್ತು ಬೇರೆ ಬೇರೆ ಕಡೆಗೆ ಈ ರೀತಿ ಯಾಗಿರತಕ್ಕಂಥ ಮನೆಗಳನ್ನು ಕಟ್ಟಿ ಅದರಲ್ಲೂ ಕೂಡ ಮೀಸಲಾತಿ ಕ್ರಮವನ್ನು ಅನುಸರಿಸುತ್ತಿದ್ದೇವೆ. ಇದು ಹೈಯರ್ ಇನ್‌ಕಮ್ ಗ್ರೂಪ್, ಹೆಚ್ಚು ಪರಮಾನ ಇರುವವರಿಗೆ ಕಟ್ಟಿಸುವ ಮನೆಗಳೇ ವಿನಹ ಎನ್‌ಆರ್‌ಐ ಕೆಳಗೆ ಮನೆಗಳನ್ನು ಕಟ್ಟಿಸಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಹೈಯರ್ ಇನ್‌ಕಮ್ ಗ್ರೂಪ್ ಎಂದು ಇಟ್ಟುಕೊಳ್ಳಿ. ಮಿಡಲ್ ಇನ್‌ಕಮ್ ಗ್ರೂಪ್ ಎಂದೇ ಇಟ್ಟುಕೊಳ್ಳಿ, ಅದರಲ್ಲಿ ಪೆಡ್ಡೊಲ್ ಕ್ಯಾಸ್ಟ್‌ಗೆ ರಿಸರ್ವೇಷನ್ ಮಾಡಿ. ಅವರು ಅರ್ಜಿಯನ್ನು ಕೊಡದಿದ್ದರೆ ಯಾರಿಗಾದರೂ ಕೊಟ್ಟುಕೊಳ್ಳಿ. ನೀವು ಏತಕ್ಕೆ ರಿಸರ್ವೇಷನ್ ಮಾಡುವುದಿಲ್ಲ ?

ಶ್ರೀ ಎಂ. ಪಿ. ಪ್ರಕಾಶ್.—ಈಗ ಕಟ್ಟಿಸಿರತಕ್ಕಂಥ ಯೋಜನೆಯ ಕೆಳಗೆ ಯಾರು ತಮ್ಮ ಹಣವನ್ನು ಕೊಡುತ್ತಾರೊ ಸೆಲ್ಫ್ ಫೈನಾನ್ಸ್ ಸ್ಕೀಮ್ ಎಂದು ನಮ್ಮ ಬಿಡಿಎ ವತಿಯಿಂದ ಕಟ್ಟತಕ್ಕಂಥ ಮನೆಗಳು ಅದರಲ್ಲಿ ವಿಶೇಷವಾತಿ ಪ್ರಶ್ನೆ ಬರುವುದಿಲ್ಲ. ಯಾರು ಯಾರು ಹಣವನ್ನು ಕೊಡುತ್ತಾರೋ ಅವರೆಲ್ಲರಿಗೂ ಕೊಡಲಾಗುತ್ತದೆ. ಉದಾಹರಣೆಗೆ ರಾಜಮಹಲ್ ಸೆಕೆಂಡ್ ಸ್ಟೇಜ್‌ನಲ್ಲಿ, ೧೫ ಜಿ ಎಂ. ನಂದಿನಿ ಲೇಔಟ್‌ಗಳಲ್ಲಿ ಯಾರು ಯಾರು ದುಡ್ಡು ಕೊಟ್ಟಿದ್ದಾರೆ ಅವರಿಗೆ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ಅವರು ಹೇಳಿದ ಹಾಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಅದರ ಮೂಲಕ ಮಾಡತಕ್ಕಂಥ ಒಂದು ಸ್ಕೀಮ್ ಇದೆ, ಹೌಡಿಂಗ್‌ರವರು ಸುಮಾರು ೮೦ರಷ್ಟು ಹಣವನ್ನು ಕೊಡಲಿಕ್ಕೆ ತಯಾರಾಗಿದ್ದಾರೆ. ಅವರು ಸೀಡ್‌ಮನಿ ೨೦ ಪರ್ಸೆಂಟ್ ಕೊಡಬೇಕು, ೨೦ ಪರ್ಸೆಂಟ್ ಸೀಡ್‌ಮನಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು ಮತ್ತು ದುರ್ಬಲ ವರ್ಗದವರು ಕೊಡಬೇಕೆಂಬ ನಿಯಮಾವಳಿಯನ್ನು ರೂಪಿಸುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಕೇಳುತ್ತಿರುವುದು ಹೈಯರ್ ಗ್ರೂಪ್ ಇನ್‌ಕಮ್ ಮನೆಗಳನ್ನು ಕಟ್ಟಿಸುತ್ತಿದ್ದೀರಲ್ಲ ಅದರಲ್ಲಿ ಯಾರು ಯಾರು ದುಡ್ಡು ಕೊಡುತ್ತಾರೆ ಅವರಿಗೆ ಕೊಡುತ್ತೇವೆಂದು ಹೇಳುತ್ತೀರಿ, ಅವರೆ ಇನ್ನೂರು ಮನೆಗಳನ್ನು ಕಟ್ಟಿಸಬೇಕೆಂದು ಏನು ಯೋಜನೆ ಇರುತ್ತದೆ ಅದರಂತೆ ಕಟ್ಟಿಸಿ ಅಲಾಟ್‌ಮೆಂಟ್ ಮಾಡುವಾಗ ೧೫ ಪರ್ಸೆಂಟ್ ರಿಸರ್ವೇಷನ್ ಇಟ್ಟರೆ ಯಾರು ಬೇಕಾದರೂ ದುಡ್ಡನ್ನು ತುಂಬುತ್ತಾರೆ. ಅವರು ಬರದಿದ್ದರೆ ಬೇರೆಯವರಿಗೆ ಅಲಾಟ್ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಅವರು ಹೇಳುತ್ತಿರುವುದು ಸೂಕ್ತವಾದ ಸಲಹೆಯಾಗಿರುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ

೧೨೬೬. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್), ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ, ಭರವಸೆ ಯೋಜನೆ ಬರಗಾಲ ಪೀಡಿತ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರೇ ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಇಲ್ಲಿಯವರೆಗೆ

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆದ ಮೊಬಲಗೆಷ್ಟು (ಯೋಜನಾವಾರು ಮಾಹಿತಿಯನ್ನು ಒದಗಿಸುವುದು.

ಆ) ಮೇಲಿನ ಅನುದಾನದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಒಟ್ಟು ಖರ್ಚು ಮಾಡಿದ ಮೊಬಲಗೆಷ್ಟು (ಯೋಜನಾವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ಮತ್ತು ವಕ್ಫ್ ಮಂತ್ರಿಗಳು). —

ಆ)	ಯೋಜನೆಗಳ ಹೆಸರು	(ಲಕ್ಷ ರೂ. ಗಳಲ್ಲಿ) ಪಡೆದ ಮೊಬಲಗು
೧	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ	೧೫೭೪.೫೫
೨	ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ	೨೯೧.೭೫೦
೩	ಬರಗಾಲ ಪೀಡಿತ ಅಭಿವೃದ್ಧಿ ಕಾರ್ಯಕ್ರಮಗಳು	೩೫೧.೮೬೦
೪	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ	೬೩೭.೦೩೦
೫	ಜೆ.ವಿ.ಪಿ. ಯೋಜನೆ	ಇಲ್ಲ
೬	ಹೆ. ಭೂ. ಸ್ವೀ. ಕೇ. ಪ್ರ. ಯೋಜನೆ	ಇಲ್ಲ
೭	ತುಂತುರು ನೀರಾವರಿ ಯೋಜನೆ	ಇಲ್ಲ
೮	ದ್ವಾಕರ್	೫.೧೦೦
೯	ಸಣ್ಣ ಮತ್ತು ಅತಿ ಸಣ್ಣ ರೈತರ ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಮಾಡುವ ಯೋಜನೆ	೧೨೧.೨೭೫
೧೦	ಆಯ್.ಆರ್.ಡಿ.ಪಿ.	೧೫೯೬.೭೩೪
೧೧	ಬಯೋ ಗ್ಯಾಸ್ (ಎಸ್.ಪಿ.ಬಿ.ಡಿ) ಸಹಾಯ ಧನ ೨೬೦.೦೦೦ ಸೇವಾ ಪೆಚ್ಚಿ ೭.೦೦೦	೨೭೧.೦೦೦
೧೨	ಎನ್.ಪಿ.ಆಯ್.ಸಿ (ಚುಲ್ಲಾ)	೪೨.೦೦೦
೧೩	ಆಯ್.ಆರ್.ಇ.ಪಿ	೭.೦೫೦

ಆ) ಮಾಹಿತಿಯನ್ನು ಲಗತ್ತಿಸಿರುವ ಕಟ್ಟಿಪ್ಪೆ ೧ರಲ್ಲಿ ಕೊಟ್ಟಿರುತ್ತದೆ. ಅವಶ್ಯ ಕಂಡಲ್ಲಿ ಇದು ರಾಜ್ಯದ ಭಾಗವು ಸಹ ಒಳಗೊಂಡಿರುತ್ತದೆ.

ANNEXURE-I

(Rs. in lakhs)

Sl. No.	District	N.R.E.P.	R.L.E.G.P.	DPAP	WGDP
1	Bangalore (Urban)	44.607	27.607	-	-
2	Bangalore (Rural)	431.961	77.412	-	-
3	Kolar	247.812	138.339	100 675	-
4	Tumkur	202.883	183.250	74.140	-
5	Chitradurga	243.620	201.059	49.428	-
6	Shimoga	183.225	140.957	-	77.330
7	Mysore	245.076	223.659	-	37.210
8	Mandya	146.585	134.295	-	-
9	Hassan	284.435	171.015	-	62.760
10	Chickmagalur	101.148	131.482	12.634	75.210
11	Kodagu	37.745	68.170	-	95.560
12	Dakshina Kannada	151.734	128.174	-	86.700
13	Belgaum	281.209	242.569	61.720	70.000
14	Bijapur	229.445	187.144	157.540	-
15	Dharwad	308.875	204.586	163.472	15.000
16	Uttara Kannada	68.310	86.961	-	144.260
17	Gulbarga	207.124	180.416	118.193	-
18	Raichur	223.036	150.507	62.571	-
19	Bellary	187.196	157.585	62.842	-
20	Bidar	96.604	103.909	40.464	-
	Total...	3922.930	2938.746	903.679	598.447

Rehabilitation of the released Ban. Lab.	Surplus land grant Asst. scheme	Sprinkler Irrgn.	DWCRA	Centrally sponsored for SF&MF for increasing Agril Prodn. (MI)	IRDP	Bioagas	Npic(Chulhas)	IREP**
59.750	-	-	-	6.500	42.010	3.640	0.620	
29.675	-	-	-	23.051	108.157	7.380	3.950	
7.734	0.065	-	-	11.746	171.465	4.320	2.160	
-	0.250	-	-	21.450	153.563	3.760	2 010	
-	-	5.420	-	23.505	143.050	3.600	1.870	
10.225	1.330	1.400	-	18.230	174.740	69.100	2 340	
220.661	-	0.198	15.000	27.509	165.438	37.390	1.350	
46.062	-	0.021	-	9.220	107.425	6.630	2,610	
16.873	2.234	1.900	-	35.280	132.125	24.890	2.380	
-	-	0.139	-	8.521	93.445	10.110	2.060	
-	0,675	-	-	11.565	63.911	22.970	0.660	
-	-	1.518	-	16.504	148.210	12 770	2.890	
-	2.684	3.690	-	57.150	166.782	44.483	1.820	
-	2.330	2.518	-	14.680	156.102	9.510	1.870	
-	0.186	0.817	10.115	64.126	238.943	36.820	2.360	
-	0.465	0,694	-	21.610	145.079	49.080	1.750	
-	9.184	0.316	-	18.950	167.981	4.040	1.180	
-	0.110	0.472	-	18.667	136.664	5.310	0.860	
-	1.020	-	-	9.270	108.940	3.580	1.750	
-	0.588	0.300	-	10.242	85.359	0.990	1 830	
390.983	21.121	19.403	25.115	407.776	2709.386	360.370	38.320	

**It is available only for staff supporting

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ನನ್ನ ಒಂದನೇ ಪ್ರಶ್ನೆಯಲ್ಲಿ ಕೇಳಿದ್ದುದು ೧೯೬೭-೬೮ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ, ಬರಗಾಲ ಪೀಡಿತ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರೇ ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಇಲ್ಲಿಯವರೆಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆದ ಮೊಬಲಗೆಷ್ಟು ಎಂದೂ ಅದಕ್ಕೆ ಕೆಲವು ವಿವರವಾದ ಕಾರ್ಯಕ್ರಮಗಳನ್ನು ಕೊಟ್ಟಿದ್ದೀರಿ. ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ನೀವು ಅನೆಕ್ಷ್ಚರ್—೧ ರಲ್ಲಿ ಜಿಲ್ಲಾವಾರು ಅಂಕಿ ಅಂಶಗಳನ್ನು ಸೇರಿಸಿ ಎನ್. ಆರ್. ಇ. ಪಿ.ಗೆ ೩೯ ಕೋಟಿ ೨೨ ಲಕ್ಷ, ಆರ್. ಎಲ್ ಇ. ಜಿ. ಪಿ.ಗೆ ೨೯ ಕೋಟಿ ೩೮ ಲಕ್ಷ, ಡಿ. ಪಿ. ಎ ಪಿ.ಗೆ ೯ ಕೋಟಿ ೩ ಲಕ್ಷ, ರೀಹ್ಯಾಬಿಲಿಟೇಷನ್‌ಗೆ ೩ ಕೋಟಿ ೯೦ ಲಕ್ಷ ಸಪ್ಲಸ್ ಲ್ಯಾಂಡ್ ಗ್ರ್ಯಾಂಟಿಗೆ ಕೇವಲ ೨೧ ಲಕ್ಷ, ಸ್ಕ್ವಿಂಕ್ಲರ್‌ಗೆ ೧೯ ಲಕ್ಷ, ಸೆಂಟ್ರಲ್ ಸಾ್ವನ್ಸ್‌ಡರ್ಡ್ ಸ್ಕಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ೪ ಕೋಟಿ ಮತ್ತು ಐ. ಆರ್. ಡಿ. ಪಿ ಗೆ ೨೭ ಕೋಟಿ ಹೀಗೆ ತಾವು ಕೆಲವು ವಿವರಗಳನ್ನು ಕೊಟ್ಟಿದ್ದೀರಿ. ಈ ಹಣದಲ್ಲಿ ನಿಮ್ಮ ಪಾಲು ಎಷ್ಟು ? ಎನ್. ಆರ್. ಇ. ಪಿ, ಮತ್ತು ಆರ್. ಎಲ್, ಇ. ಜಿ. ಪಿ.ಯಲ್ಲಿ ನೀವು ಖರ್ಚು ಮಾಡಿದ್ದುದು ಎಷ್ಟು, ಡಿ. ಪಿ. ಎ. ಪಿ ಗೆ ನೀವು ಖರ್ಚು ಮಾಡಿದ ಹಣವೆಷ್ಟು ? ವಾಸ್ತವವಾಗಿ ಈ ಬಾಬುಗಳಿಗೆ ರಾಜ್ಯ ಸರ್ಕಾರದಿಂದ ಖರ್ಚು ಮಾಡಿದ ಹಣ ಎಷ್ಟು ? ಅಂಕಿ ಅಂಶಗಳನ್ನು ನೋಡಿದರೆ ೫೦ ಪರ್ಸೆಂಟ್ ಹಣ ಕೇಂದ್ರ ಸರ್ಕಾರದಿಂದ ಬಂದದ್ದು ಇದೆ. ಕೆಲವು ಕಾರ್ಯಕ್ರಮಕ್ಕೆ ೧೦೦ ಪರ್ಸೆಂಟ್ ಇದೆ. ಕೆಲವಕ್ಕೆ ೫೦ ಪರ್ಸೆಂಟ್ ಇದೆ, ಮತ್ತೆ ಕೆಲವಕ್ಕೆ ೭೫ ಪರ್ಸೆಂಟ್ ಇದೆ. ಈ ವ್ಯತ್ಯಾಸದ ಬಗ್ಗೆ ನಾನು ಕೇಳಬಯಸುತ್ತೇನೆ. ನೀವು ಕೊಟ್ಟಿರತಕ್ಕ ಅನೆಕ್ಷ್ಚರ್ ಏನಿದೆ ಇದರಲ್ಲಿ ನಿಮ್ಮ ಪಾಲು ಎಷ್ಟು ? ಏತಕೆ ಹೆಚ್ಚಿನ ಹಣವನ್ನು ಖರ್ಚು ಮಾಡಲಿಕ್ಕೆ ಆಗಿಲ್ಲ? ಯೋಜನೆಗಳು ಒಳ್ಳೆಯದಿದ್ದು ಅವುಗಳಿಂದ ರೈತರಿಗೆ ಮತ್ತು ಜನ ಸಾಮಾನ್ಯರಿಗೆ ನೇರವಾಗಿ ಸಹಾಯವಾಗುತ್ತಿದ್ದರೆ ನೀವು ಹೆಚ್ಚಿನ ಹಣವನ್ನು ಖರ್ಚು ಮಾಡುವ ಪ್ರಯತ್ನವನ್ನು ಏಕೆ ಮಾಡಲಿಲ್ಲ ? ಇದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್.— ಹೆಚ್ಚು ಹಣ ಖರ್ಚು ಮಾಡಿಲ್ಲ ಎಂಬುದಕ್ಕೆ ಹೇಳುವುದಾದರೆ ಎನ್. ಆರ್. ಇ. ಪಿ.ಗೆ ೩೯ ಕೋಟಿ ರೂಪಾಯಿಗಳನ್ನು ಹೇಗೆ ಕೊಡುತ್ತೇವೆಂದರೆ ೧೫ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಟ್ಟರೆ ನಾವು ೧೫ ಕೋಟಿ ರೂಪಾಯಿಗಳನ್ನು ಹಾಕುತ್ತೇವೆ. ಫುಡ್ ಎಲ್ಲಾ ಸೇರಿ ೩೯ ಕೋಟಿ ರೂಪಾಯಿ ಖರ್ಚು ಮಾಡಬೇಕು. ೧೦೦ ಪರ್ಸೆಂಟ್ ಎಂದರೆ ಅದು ತಮಗೆ ಗೊತ್ತಿದೆ. ಕೇಂದ್ರ ಸರ್ಕಾರ ಏನಾ ನಿಗದಿ ಮಾಡಿರುತ್ತದೆ ಆ ಪ್ರಕಾರ ಮಾಡಬೇಕಾಗುತ್ತದೆ, ಆ ಪ್ರಕಾರ ಅದು ೩೮ ಕೋಟಿ ೬೪ ಲಕ್ಷದ ೭೧೦ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದರೆ ನಾವು ಖರ್ಚು ಮಾಡಿರುವುದು ೨೯ ಕೋಟಿ. ಪರ್ಸೆಂಟೇಜ್ ಆಫ್ ಫರ್‌ಫಾರ್ಮೆನ್ಸ್ ೧೦೧.೫೧ ಕಡಿಮೆ ಏನೂ ಆಗಿಲ್ಲ. ಇನ್ನೂ ಹಣ ಇದೆ. ಹಣ ಏತಕ್ಕೆ ಇದೆ ಎಂದರೆ, ನವೆಂಬರ್ ವರೆಗೆ ರಾಜ್ಯಗಳಲ್ಲಿ ಏನೇನು ವೆಚ್ಚ ಮಾಡುತ್ತೇವೆ ಅದನ್ನು ನೋಡಿ ಯಾವ ರಾಜ್ಯ ಚೆನ್ನಾಗಿ ಕೆಲಸ ಮಾಡುತ್ತದೆ ಆ ಪ್ರಕಾರ ಆದಕ್ಕೆ ಹೆಚ್ಚು ಪರಿ ಹಣವನ್ನು ಯೋಜನಾ ಆಯೋಗದವರು ಕೊಡುತ್ತಾರೆ. ನಮಗೂ ಆ ರೀತಿ ಹಣ ಬಂದಿದೆ. ನಾವು ಅದಕ್ಕೆ ತಕ್ಕಂತೆ ಕಾಂಟ್ರಿಬ್ಯೂಷನ್ ಹಾಕುತ್ತೇವೆ. ಶೇಕಡ ೭೦ ಕ್ಕಿಂತ ಕಡಿಮೆ ಆದಾಗ ಲ್ಯಾಪ್ಸ್ ಆಗುತ್ತದೆ. ನಾವು ೭೫ ಪರ್ಸೆಂಟ್ ಮಾಡಿದ್ದೇವೆ ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಪಾರ್ಟ್ (ಎ) ಮತ್ತು ಪಾರ್ಟ್ (ಬಿ) ಎಂದು ಎರಡು ಭಾಗ ಇರುತ್ತದೆ. ಪಾರ್ಟ್ (ಬಿ) ಅಂದರೆ ಕ್ಯಾರಿ ಓವರ್ ವರ್ಕ್‌ಗೆ ಸಂಬಂಧ ಪಟ್ಟದ್ದು. ಎಪ್ರಿಲ್ ಮೇ ಆದರೂ ಬಜೆಟ್ ಪಾಸ್ ಆಗಿರುವುದಿಲ್ಲ. ಆ ಸಮಯದಲ್ಲಿ ಕೂಲಿ ಗಾರರಿಗೆ ಕೆಲಸ ಒದಗಿಸಬೇಕೆಂದು ೨೫ ಪರ್ಸೆಂಟ್ ಬಜೆಟ್ ಕ್ಯಾರಿ ಓವರ್ ಮಾಡುತ್ತೇವೆ. ಆರ್. ಎಲ್. ಇ. ಜಿ. ಪಿ. ಯಲ್ಲಿ ರಾಜ್ಯದ ಪರ್‌ಫಾರ್ಮೆನ್ಸ್ ೯೮ ಪರ್ಸೆಂಟ್. ರಾಷ್ಟ್ರ ಮಟ್ಟದಲ್ಲಿ ಳನೇ ಸ್ಥಾನವನ್ನು ಪಡೆದಿದೆ. ನಮಗೆ ಕೊಟ್ಟಿರತಕ್ಕ ಗುರಿಯನ್ನು ೮೦ರಿ ಖರ್ಚು ಮಾಡಿದ್ದೇವೆ, ಅದರಲ್ಲೇನು ನಾವು ಹಿಂದುಳಿದಿಲ್ಲ.

೩-೦೦ ಪಿ. ಯಂ.

ಅಧ್ಯಕ್ಷರಂ.—ಮಾನ್ಯ ಖರ್ಗೆಯವರೆ, ಇನ್ನು ಒಂದೇ ಒಂದು ಪ್ರಶ್ನೆ ಇದೆ. ಅದನ್ನು ಲ್ಯಾಪ್ಸ್ ಮಾಡುವುದು ಬೇಡ. ನೀವು ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಹಾಕಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದೇ ಒಂದು ಪ್ರಶ್ನೆ ಇದೆ. ಸರ್‌ಪ್ಲಸ್ ಲ್ಯಾಂಡ್ ಗ್ರಾಂಟ್ ಸ್ಕೀಮ್ ಇದೆಯಲ್ಲ ಅದರಲ್ಲಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣ ಬಂದಿಲ್ಲ ಎಂದು ಹೇಳಿದ್ದೀರಿ ನಾನು ಕೇಳುವುದೇನೆಂದರೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಎಲ್ಲೆಲ್ಲಿ ಸರ್‌ಪ್ಲಸ್ ಲ್ಯಾಂಡ್ ಕೊಟ್ಟಿದ್ದೇವೆ ಅವರಿಗೆ ಅನುಕೂಲ ಆಗಬೇಕು. ಅವರು ಭೂಮಿಯನ್ನು ಉಳಿಸಿಕೊಳ್ಳಬೇಕು ಅಂದರೆ ಕನಿಷ್ಠಪಕ್ಷ ಈ ಬಗ್ಗೆ ತಾವು ಗಮನ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ೨೧ ಲಕ್ಷ ರೂಪಾಯಿ ಗಳಿಂದ ಎಷ್ಟು ಜನರಿಗೆ ಬೆನಿಫಿಟ್ ಆಗಿದೆ ? ಇನ್ನೂ ಎಷ್ಟು ಟಾರ್ಗೆಟ್ ಇದೆ ?

ಶ್ರೀ ಅಬ್ದುಲ್ ನಜೀರ್ ಸಾಬ್. ಗುರಿ ಇಲ್ಲ. ೨೧ ಲಕ್ಷ ಖರ್ಚು ಮಾಡಬೇಕೆಂದಿದೆ. ಸರ್‌ಪ್ಲಸ್ ಲ್ಯಾಂಡ್ ಈಗ ಸಿಗುವುದಿಲ್ಲ. ಈ ವರ್ಷ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಎಕರೆ ಕೂಡ ಸರ್‌ಪ್ಲಸ್ ಲ್ಯಾಂಡ್ ಇಲ್ಲ. ನಾನೇನು ಮಾಡಬೇಕು ? ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಒಂದು ತಿದ್ದುಪಡಿ ಮಾತಾಡ್ದೇವೆ ೧೯೮೫ ರಿಂದ ಈಚೆಗೆ ದರಖಾಸ್ತು ಭೂಮಿ ಏನು ಪಡೆದಿದ್ದಾರೆ ಅವರಿಗೆ ಕೂಡ ಸಬ್ಸಿಡಿ ಕೊಡುತ್ತೇವೆ, ಬ್ಯಾಂಕಿನ ಸಹಾಯ ಒದಗಿಸುತ್ತೇವೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಸರ್‌ಪ್ಲಸ್ ಲ್ಯಾಂಡ್ ಇದೆ. ಬೇಕಾದಷ್ಟಿದೆ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಎಲ್ಲಿ ವಾಪಸ್ ತೆಗೆದುಕೊಳ್ಳುತ್ತಿದ್ದಾರೆ ? ಭೂ ಕಾಯಿದೆ ಗನುಗುಣವಾಗಿ ಹೆಚ್ಚುವರಿ ಭೂಮಿ ಇರುವುದನ್ನು ಹೇಳುತ್ತಿದ್ದೇನೆ. ಕಾನೂನು ಪ್ರಕಾರ ಹೈಕೋರ್ಟ್ ಹೇಳಿದಂತೆ ನಡೆದುಕೊಳ್ಳಬೇಕು. ಕಾನೂನು ಪ್ರಕಾರ ಎಲ್ಲಿಯೂ ಸರ್‌ಪ್ಲಸ್ ಲ್ಯಾಂಡ್ ಇಲ್ಲ. ಪ್ರತಿ ಜಿಲ್ಲೆಗೂ ಇದು ಹಂಚಿಕೆಯಾಗಬೇಕು. ಅದಕ್ಕಾಗಿ ದರಖಾಸ್ತು ಭೂಮಿ ಕೊಟ್ಟವರಿಗೂ ಕೊಡಬೇಕೆಂದು ಹೇಳಿದ್ದೇನೆ. ಕೇಂದ್ರಕ್ಕೆ ಈ ಬಗ್ಗೆ ಬರೆದಿದ್ದೇವೆ ಅವರೂ ಒಪ್ಪಿದ್ದಾರೆ.

ಅಧ್ಯಕ್ಷರು.— ಮುಂದಿನ ಪ್ರಶ್ನೆ ವೆಂಕಟರಾಮಯ್ಯನವರದು. ಅವರ ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಮತ್ತೆ ತಪ್ಪಾಗಿದೆ. ಸಿ ಅಂಡ್ ಐ ಎಂದೂ ಹೇಳಿದ್ದಾರೆ. ಅದೂ ತಪ್ಪು. ಭೂಗರ್ಭ ಇಲಾಖೆಗೆ ಹೋಗಬೇಕು.

ಅಧ್ಯಕ್ಷರು.— ಮುಂದಿನ ಪ್ರಶ್ನೆ ಡಿ. ಟಿ. ಜಯಕುಮಾರ್ ಅವರದು ಮಾನ್ಯ ಮಂತ್ರಿಗಳು ಸದಸ್ಯರಲ್ಲಿಲ್ಲ ಎಂದು ಹೊರಗೆ ಹೋಗಿದ್ದಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಲನಚಿತ್ರ ತರಬೇತಿ ಕಾಲೇಜುಗಳು

೧೫೫೩. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ಚಲನಚಿತ್ರ ತರಬೇತಿ ಕಾಲೇಜನ್ನು ನಡೆಸುತ್ತಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವ ಯಾವ ವಿಷಯಗಳಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ.

ಇ) ಇದುವರೆಗೆ ಎಷ್ಟು ವಿದ್ಯಾರ್ಥಿಗಳು ತರಬೇತಿ ಹೊಂದಿದ್ದಾರೆ ? (ವಿವಿಧ ವಿಷಯಗಳ ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಇಲ್ಲ.